# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 25-03-2021 ಪ್ರಶ್ನೆ ಸಂಖ್ಯೆ : 1871 (2165)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)

ಉತ್ತರ ನೀಡಬೇಕಾದ ದಿನಾಂಕ : 25-03-2021

ಉತ್ತರಿಸುವ ಸಚಿವರು: ಸಣ್ಣ ನೀರಾವರಿ ಸಚಿವರು

ವಿಷಯ : ರಾಷ್ಟ್ರೀಯ "ಪ್ರತಿಹನಿಗೂ ಅಧಿಕ ಬೆಳೆ (Per Drop More Crop-PDMC) " ಯೋಜನೆ ಬಗ್ಗೆ

(ಅ) ಕೇಂದ್ರ ಸರ್ಕಾರದ ಪುರಸ್ಕೃತ ರಾಷ್ಟ್ರೀಯ "ಪ್ರತಿಹನಿಗೂ ಅಧಿಕ ಬೆಳೆ (Per Drop More Crop-PDMC)" ಯೋಜನೆ ಅಡಿ ಹನಿ ಮತ್ತು ತುಂತುರು ಹನಿ ನೀರಾವರಿಗೆ ರಾಜ್ಯ ಸರ್ಕಾರಗಳಿಗೆ ಕೇಂದ್ರ ಸರ್ಕಾರ ಪ್ರಧಾನ ಮಂತ್ರಿ ಕೃಷಿ ಸಂಚಯ ಯೋಜನೆಯಲ್ಲಿ ಪ್ರತಿ ವರ್ಷ ನೀಡುತ್ತಿರುವ ಆರ್ಥಿಕ ನೆರವು ಎಷ್ಟು;

(ಆ) ಈ ಆರ್ಥಿಕ ನೆರವಿನೊಂದಿಗೆ ರಾಜ್ಯ ಸರ್ಕಾರ ಈ ಯೋಜನೆಗೆ ತೊಡಗಿಸಿರುವ ಅನುದಾನವೆಷ್ಟು; ಈ ಯೋಜನೆಯಡಿ 2018-19 ರಿಂದ ಇದುವರೆಗೂ ನಿಗಧಿಪಡಿಸಿರುವ ಭೌತಿಕ-ಆರ್ಥಿಕ ಗುರಿ ಮತ್ತು ಸಾಧನೆಗಳೇನು; (ವಿವರ ನೀಡುವುದು)

(ಇ) ಕೇಂದ್ರ ಸರ್ಕಾರದ ನಬಾರ್ಡ್ ಸಂಸ್ಥೆಯಿಂದ ರಾಜ್ಯ ಸರ್ಕಾರಗಳಿಗೆ ಮೈನರ್ ಇರಿಗೇಷನ್ ಸ್ಥಿರೀಕರಣ ನಿಧಿ (MIF) ಯಿಂದ ಒದಗಿಸಿರುವ ಅನುದಾನವೆಷ್ಟು ಮತ್ತು ಈ ಅನುದಾನವನ್ನು ಯಾವ ಯಾವ ಯೋಜನೆಯಡಿ ಉಪಯೋಗಿಸಲಾಗಿದೆ? (ಕಳೆದ ಮೂರು ವರ್ಷಗಳ ಸಂಪೂರ್ಣ ಮಾಹಿತಿ ನೀಡುವುದು)